

# ಲೇಸ್ ಉಡುಪು ಹೊಸತನದ ಹೊಳಪು

■ ಕವಿತಾ ವಿನು ಭಟ್ಟ

**ಲೇಸ್ ಉಡುಪು ಫ್ಯಾಷನ್ ಜಗತ್ತಿನಲ್ಲಿ ಮೆರೆಯುತ್ತಿದೆ. ಉಡುಪಿಗೆ ತಕ್ಕ ಲೇಸ್ ಅನ್ನು ಹೊಲಿದು ಧರಿಸುತ್ತಿದ್ದ ಕಾಲ ಬದಲಾಗಿ ಇಡೀ ಉಡುಪನ್ನೇ ಲೇಸ್‌ನಿಂದ ತಯಾರಿಸಿ ತೊಡುವ ಕಾಲ ಬಂದಿದೆ.**

ಆಧುನಿಕ ಫ್ಯಾಷನ್ ಉಡುಗೆ ಪ್ರಪಂಚದಲ್ಲಿ ಒಮ್ಮೆ ಕಣ್ಣಾಡಿಸಿದರೆ ನೂರಾರು ಹೊಸ ಬಗೆಯ ಡ್ರೆಸ್‌ಗಳು ಕಣ್ಣು ಕೋರೈಸುತ್ತವೆ. ಹಾಗೆ ಪರಿಚಯಿಸಲಾದ ಈ ಲೇಸ್ ಉಡುಪು ಎವರ್‌ಗ್ರೀನ್ ಫ್ಯಾಷನ್ ಎನಿಸಿದೆ.

ತೊಂಬತ್ತರ ದಶಕದಲ್ಲಿ ಮಹಿಳೆಯರು ಸೀರೆಯ ಸೆರಗಿನ ತುದಿಗೆ ಲೇಸ್ ಹೊಲಿದುಕೊಳ್ಳುತ್ತಿದ್ದರು. ನಂತರದ ದಿನಗಳಲ್ಲಿ ನೆಕ್ ಔಟ್‌ಲೈನ್, ತೋಳಿನ ಭಾಗ, ಮಕ್ಕಳ ಫ್ರಾಕ್‌ಗಳ ತುದಿಯಲ್ಲಿ ಕಪ್ಪು ಅಥವಾ ಬಿಳಿ ಬಣ್ಣದ ದಾರದ ಎಳೆಗಳಿಂದ ಕ್ರೋಶಾ ಕಡ್ಡಿಯಿಂದ ಲೇಸ್ ತಯಾರಿಸಿ ಹೊಲಿಯುತ್ತಿದ್ದರು. ಕಾಲ ಕಳೆದಂತೆ ಸೀರೆ ತುದಿಯ ಅಂದ ಹೆಚ್ಚಿಸುತ್ತಿದ್ದ ಲೇಸ್‌ಗಳೀಗ ಪೂರ್ತಿ ಉಡುಪಾಗಿಯೇ ಪರಿವರ್ತನೆಗೊಂಡು ಲಲನೆಯರ ಸೌಂದರ್ಯ ಹೆಚ್ಚಿಸಲು ಅಣಿಯಾಗಿದೆ.

ಸೆಲೆಬ್ರಿಟಿ ಮತ್ತು ಮಾಡೆಲ್‌ಗಳು ಏನೇ ಮಾಡಿದರೂ ಅದು ಟ್ರೆಂಡ್ ಎನಿಸುತ್ತದೆ. ಲೇಸ್ ಫ್ಯಾಬ್ರಿಕ್ ಸಹ ಜನಸಾಮಾನ್ಯರಿಗೆ ಹತ್ತಿರವಾಗಿದ್ದು ಸೆಲೆಬ್ರಿಟಿಗಳ ಕೊಡುಗೆ. ಫ್ಯಾಷನ್ ಶೋ ಮತ್ತು ಫಿಲ್ಮ್‌ಫೇರ್ ಅವಾರ್ಡ್ ಸಮಾರಂಭಗಳಲ್ಲಿ ಹಾಲಿವುಡ್ ಬಾಲಿವುಡ್ ಹೀರೊಯಿನ್‌ಗಳು ಧರಿಸುವ ಕಪ್ಪು ಬಣ್ಣದ ಲೇಸ್ ಉಡುಪುಗಳು ಗ್ಲಾಮರಸ್ ಲುಕ್‌ಗೆ ಪ್ರಸಿದ್ಧಿಯಾಗಿವೆ.

ಲೇಸ್ ಬಟ್ಟೆ ನೋಡಲು ಪಾರದರ್ಶಕದಂತೆ ಕಂಡರೂ ಎಕ್ಸ್‌ಪೋಸ್ ಆಗುವುದಿಲ್ಲ ಎನ್ನುವುದೇ ಇದರ ವೈಶಿಷ್ಟ್ಯ. ಕಪ್ಪು ಮತ್ತು ಬಿಳಿ ಎರಡೇ ಬಣ್ಣದ ಲೇಸ್‌ಗಳ ಜಾಗವನ್ನು ಇದೀಗ ಬಣ್ಣಬಣ್ಣದ ಲೇಸ್‌ಗಳು ಬಂದು ಹೊಸ ಟ್ರೆಂಡ್ ಸೃಷ್ಟಿಸಿವೆ. ಗಾಢ ಬಣ್ಣಗಳಾದ ಕೆಂಪು, ಹಸಿರು, ನೀಲಿ, ನೇರಳೆ ಮತ್ತು ತಿಳಿ ಬಣ್ಣಗಳಾದ ಗುಲಾಬಿ, ಹಳದಿ, ಪಿಸ್ತಾ ಬಣ್ಣಗಳು ಬೋಲ್ಡ್ ಮತ್ತು ಗ್ಲಾಮರಸ್ ಲುಕ್ ಕೊಡುತ್ತವೆ. ಲೇಸ್‌ಗಳಿಂದ ಶೃಂಗಾರಗೊಂಡ ಗೌನ್, ಲೆಹೆಂಗಾ, ಗಾಗ್ರಾ ಚೋಲಿ, ಸೀರೆಗಳು ಸಮಾರಂಭಗಳಲ್ಲಿ ಗ್ಲಾಮರಸ್ ನೋಟ ನೀಡಲು ಸಹಕಾರಿ.

ಲೇಸ್‌ಗಳಲ್ಲಿ ಹಲವಾರು ವೈವಿಧ್ಯಗಳಿದ್ದು ಸಂದರ್ಭಕ್ಕೆ ತಕ್ಕಂತೆ ಉಡುಪುಗಳ ಆಯ್ಕೆ ಮಾಡಿಕೊಳ್ಳಬಹುದು. ಕೆಮಿಕಲ್ ಲೇಸ್, ಎಂಬ್ರಾಯಿಡರಿ ಲೇಸ್, ಕ್ರೋಚೆಟ್, ನೆಟ್, ಕಾಟನ್, ಚಾಂಟಿಲಿ, ಬಾಸ್ಕೆಟ್ ವೀವ್, ಕಸೂತಿ, ಐಲೆಟ್, ಗೈಪೂರ್, ಸೀಕ್ವಿನ್ಡ್, ಬ್ರಸೆಲ್ಸ್ ಹೀಗೆ ಹಲವಾರು.

ಕ್ಯಾಶುವಲ್ ಬಳಕೆಗೆ ಬಿಳಿ ಬಣ್ಣದ ಕಾಟನ್ ಲೇಸ್ ಆರಾಮದಾಯಕ. ಇನ್ನು ಸ್ಪೆಷಲ್ ಸಂದರ್ಭಕ್ಕೆ 3 ಡಿ ಹೂವಿನ ಲೇಸ್‌ಗಳನ್ನು ಕೂಡ್ರಿಸಿದ ಗಾಗ್ರಾ, ಲೆಹೆಂಗಾ ಸುಂದರ ನೋಟ ನೀಡಲು ಸಹಕಾರಿ. ಸಾಂಪ್ರದಾಯಿಕ ಮದುವೆಗಳಲ್ಲಿ ಮದುಮಗಳ ಉಡುಗೆ ತೊಡುಗೆ ಅಲೆನ್ಕಾನ್ ಲೇಸ್ ಬೆಸ್ಟ್. ಇಂಥ ಲೇಸನ್ನು ಮೆಷೀನ್‌ನಲ್ಲಿ ಹೊಲಿಯಲಾಗುವುದಿಲ್ಲ. ಬದಲಾಗಿ ಹ್ಯಾಂಡ್ ಮೇಡ್ ಕಸೂತಿ ಅವಶ್ಯಕವಿದೆ. ವಧುವಿನ ಉಡುಪಿಗೆ ಇದು ಶ್ರೀಮಂತ ನೋಟ ನೀಡಲು ಉತ್ತಮ ಆಯ್ಕೆ. ಮಣಿಗಳ ಲೇಸ್ ಡ್ರೆಸ್ ಕೂಡ ಟ್ರೆಂಡ್ ಸೃಷ್ಟಿಸಿದೆ.



